# ಬಿ.ಎಸ್.ಎನ್.ಎಲ್ ನೌಕರರ ಕ್ಷೇಮಾಭಿವೃದ್ಧಿ ಗೃಹನಿರ್ಮಾಣ ಸಹಕಾರ ಸಂಘ ನಿ.,

ನಂ.19 (ಹೊಸ ನಂ.32)1ನೆ ಮಹಡಿ, 10ನೆ ಕ್ರಾಸ್,ಸಂಪಿಗೆ ರಸ್ತೆ, ಮಲ್ಲೇಶ್ವರಮ್, ಬೆಂಗಳೂರು-560003

(ನೋಂದಣಿ ಸಂಖ್ಯೆ:ಡಿಆರ್‌ಬಿ/ಆರ್/ನೋಂ./32229/2006-07/07-02-2007)

**PH-080-23467078 //23467079// 7019660309**

# BSNL EMPLOYEES WELFARE HOUSE BUILDING CO OP SOCIETY LTD.,

No.19(New No.32), 1st Floor, 10th Cross, Sampige Road, Malleswaram, Bangalore-560003.

Email: bsnlhousingsociety.bg@gmail.com Website: bsnlempshousing.com

## 2025-26 ನೇ ಸಾಲಿನ

## ವಾರ್ಷಿಕ ಆಡಳಿತ ವರದಿ ಹಾಗೂ ಪರಿಶೀಲನೆಗೊಂಡ ಲೆಕ್ಕಪತ್ರಗಳು

## ANNUAL REPORT & AUDITED FINANCIAL STATEMENT FOR THE YEAR 2025-2026

## 2025-26 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ

**ದಿನಾಂಕ: ದಿನಾಂಕ: 23-09-2026, ಬುಧವಾರ ಸಮಯ: ಬೆಳಿಗ್ಗೆ 11:00 ಗಂಟೆಗೆ**

**ಸ್ಥಳ: ನಾಟಕ ಶಿರೋಮಣಿ ಎ.ವಿ. ವರದಾಚಾರ್ ಮೆಮೋರಿಯಲ್ ಹಾಲ್,**
**ನಟರಾಜ್ ಟಾಕೀಸ್ ಹಿಂಭಾಗ, ಶೇಷಾದ್ರಿಪುರಂ, ಬೆಂಗಳೂರು-560020**

## GENERAL BODY MEETING FOR THE YEAR 2025-26

DATE: 23-09-2026 Wednesday Time: Morning 11-00am.

VENUE:- Nataka Shiromani A.V. Varadachar Memorial Hall,
Behind of NatarajaTalkies, Sheshadripuram, Bangalore-560 020

**ಬಿ.ಎಸ್.ಎನ್.ಎಲ್. ನೌಕರರ ಕ್ಷೇಮಾಭಿವೃದ್ಧಿ ಗೃಹನಿರ್ಮಾಣ ಸಹಕಾರ ಸಂಘ ನಿ.,**

ಸಂ.19 (ಹೊಸ ನಂ.32)1ನೆ ಮಹಡಿ, 10ನೆ ಕ್ರಾಸ್,ಸಂಪಿಗೆರಸ್ತೆ,ಮಲ್ಲೇಶ್ವರಮ್, ಬೆಂಗಳೂರು-3.

## ಆಡಳಿತ ಮಂಡಳಿಯ ಸದಸ್ಯರು

**ಶ್ರೀಯುತ ಎಸ್. ಸುಬ್ರಮಣಿ**

ಅಧ್ಯಕ್ಷರು

**ಶ್ರೀಯುತ ಚಂದ್ರಪ್ಪ**

ಉಪಾಧ್ಯಕ್ಷರು

| | |
|---|---|
| **ಶ್ರೀಯುತ ಸಿದ್ಧರಂಗಯ್ಯ** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ಮುರಳಿಮೋಹನ್** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಮತಿ ಕೆಂಚಮ್ಮ** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಮತಿ ನೇತ್ರಾವತಿ ಆರ್** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಮತಿ ಮಂಗಳಗೌರಮ್ಮ** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ಚಿಕ್ಕಣ್ಣ ಹೆಚ್ ಸಿ** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ವೆಂಕಟೇಶನ್** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ಹನುಮಂತರಾಯಪ್ಪ** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ನಂಜಪ್ಪ ಕೆ. ಆರ್** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ಸಂಪತ್ ಎಮ್** | ಆಡಳಿತ ಮಂಡಳಿ ನಿರ್ದೇಶಕರು |
| **ಶ್ರೀಯುತ ಗೋವಿಂದ ರಾಮೇಗೌಡ** | ಆಡಳಿತ ಮಂಡಳಿ ನಿರ್ದೇಶಕರು |

# ಬಿ.ಎಸ್.ಎನ್.ಎಲ್. ನೌಕರರ ಕ್ಷೇಮಾಭಿವೃದ್ಧಿ ಗೃಹನಿರ್ಮಾಣ ಸಹಕಾರ ಸಂಘ ನಿ.,

ಸಂ.19 (ಹೊಸ ನಂ.32)1ನೆ ಮಹಡಿ, 10ನೆ ಕ್ರಾಸ್, ಸಂಪಿಗೆರಸ್ತೆ, ಮಲ್ಲೇಶ್ವರಮ್, ಬೆಂಗಳೂರು-3.

**Ph : 080-23467078/79//7019660309**

**Mail Id-bsnlhousingsociety.bg@gmail.com** **Web Site:-bsnlempshousing.com**

## 2025-26 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ಸೂಚನಾಪತ್ರ

ಬಿಎಸ್ಎನ್ಎಲ್ ನೌಕರರ ಕ್ಷೇಮಾಭಿವೃದ್ಧಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಸಂಘದ 2025-26 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ: 23-09-2026 ರಂದು ಬುಧವಾರ ಬೆಳಗಿನ 11-00 ರಿಂದ 2-00 ರವರೆಗೆ** ಸಂಘದ ಅಧ್ಯಕ್ಷರಾದ ಶ್ರೀ ಎಸ್. ಸುಬ್ರಮಣಿ ರವರ ಅಧ್ಯಕ್ಷತೆಯಲ್ಲಿ **"ನಾಟಕ ಶಿರೋಮಣಿ ಎ.ವಿ. ವರದಾಚಾರ್ ಮೆಮೋರಿಯಲ್ ಹಾಲ್, ನಟರಾಜ್ ಟಾಕೀಸ್ ಹಿಂಭಾಗ, ಶೇಷಾದ್ರಿಪುರಂ, ಬೆಂಗಳೂರು-560020"** ಇಲ್ಲಿ ನಡೆಸುವಂತೆ ಆಡಳಿತ ಮಂಡಳಿಯು ನಿರ್ಧರಿಸಿದ್ದು, ಮಾನ್ಯ ಸದಸ್ಯರೆಲ್ಲ ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

### ಸಭೆಯ ಕಾರ್ಯಸೂಚಿ

1. ದೇವತಾ ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಇಂದಿನ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾಪತ್ರವನ್ನು ಸಭೆಯಲ್ಲಿ ಓದಿ ರೆಕಾರ್ಡಮಾಡುವುದು.
4. 2024-25 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನಡುವಳಿಯ ಅನುಮೋದನೆ.
5. 2025-26 ನೇ ಸಾಲಿನ ವಾರ್ಷಿಕ ವರದಿ ಮಂಡನೆ ಹಾಗೂ ಅನುಮೋದನೆ.
6. 2025-26 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ.
7. ಸಂಘದ 2026-27 ನೇ ಸಾಲಿಗೆ ಮುಂಗಡಪತ್ರ ಮಂಡನೆ ಹಾಗು ಅನುಮೋದನೆ.
8. ಸಂಘದ 2026-27 ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಕ್ಕೆ ಅನುಮೋದನೆ.
9. ರಾಜ್ ರೆಸಿಡೆನ್ಸಿ ಬಡಾವಣೆಯನ್ನು ಸ್ಥಗಿತಗೊಳಿಸಿ, ಸದಸ್ಯರಿಗೆ ಹಣ ಮರುಪಾವತಿಸುವ ಕರಿತು ಚರ್ಚೆ.
10. ನಿವೇಶನ ದರ ಪರಿಷ್ಕರಣೆ.
11. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸತಕ್ಕ ಇತರ ವಿಷಯಗಳು.
12. ಅಧ್ಯಕ್ಷರ ಭಾಷಣ.
13. ವಂದನಾರ್ಪಣೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸ್ಥಳ: ಬೆಂಗಳೂರು  
ದಿನಾಂಕ: 28-08-2026

ಸಹಿ/-  
ಎಸ್. ಸುಬ್ರಮಣಿ  
ಅಧ್ಯಕ್ಷರು

# ಬಿ.ಎಸ್.ಎನ್.ಎಲ್. ನೌಕರರ ಕ್ಷೇಮಾಭಿವೃದ್ಧಿ ಗೃಹನಿರ್ಮಾಣ ಸಹಕಾರ ಸಂಘ ನಿ.,

ಸಂ.19 (ಹೊಸ ನಂ.32)1ನೆ ಮಹಡಿ, 10ನೆ ಕ್ರಾಸ್, ಸಂಪಿಗೆರಸ್ತೆ, ಮಲ್ಲೇಶ್ವರಮ್, ಬೆಂಗಳೂರು-3.

**-:2024-25 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು:-**

ಬಿ.ಎಸ್.ಎನ್.ಎಲ್. ನೌಕರರ ಕ್ಷೇಮಾಭಿವೃದ್ಧಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಸಂ.19(ಹೊಸ ಸಂ.32), 1ನೆ ಮಹಡಿ, 10ನೆ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಮ್, ಬೆಂಗಳೂರು-560003. ಇದರ 2024-25 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ನಿಗದಿತ ದಿನಾಂಕ: 24-09-2025 ರ ಬುಧವಾರ ದಂದು ಬೆಳಗಿನ 11-00 ಘಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಸುಬ್ರಮಣಿ ಅವರ ಅಧ್ಯಕ್ಷತೆಯಲ್ಲಿ "ನಾಟಕ ಶಿರೋಮಣಿ ಎ.ವಿ. ವರದಾಚಾರ್ ಮೆಮೋರಿಯಲ್ ಹಾಲ್, ನಟರಾಜ್ ಟಾಕೀಸ್ ಹಿಂಭಾಗ, ಶೇಷಾದ್ರಿಪುರಂ, ಬೆಂಗಳೂರು-560020" ರಲ್ಲಿ ನಡೆಸಲಾಯಿತು. ಪ್ರಾರಂಭದಲ್ಲಿ ನಿರೂಪಕರಾದ ಎಚ್. ಎಸ್. ಪ್ರಸಾದ್‌ರವರು ಅಧ್ಯಕ್ಷರನ್ನು , ಉಪಾಧ್ಯಕ್ಷನ್ನು ಹಾಗೂ ಸಂಘದ ಆಡಳಿತ ಮಂಡಳಿಯ ಸದಸ್ಯರನ್ನು ವೇದಿಕೆಗೆ ಆಹ್ವಾನಿಸಿ ಪೀಠವನ್ನು ಅಲಂಕರಿಸಲು ಕೋರಿದರು. ನಂತರ ಸಭೆಗೆ ಆಗಮಿಸಿದ ಸರ್ವಸದಸ್ಯರನ್ನು ಹೃತ್ಪೂರ್ವಕವಾಗಿ ಸಭೆಗೆ ಆಹ್ವಾನಿಸಿದರು, ಮುಂದುವರಿದು ಸಂಘದ ಅಧ್ಯಕ್ಷರಾದ ಶ್ರೀಯುತ ಎಸ್. ಸುಬ್ರಮಣಿ ಅವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿ ಕೊಡುವಂತೆ ವಿನಂತಿಸಿದರು. ಅಧ್ಯಕ್ಷರ ಅನುಮತಿಯೊಂದಿಗೆ ಸಭೆಯ ಕಾರ್ಯಕಲಾಪವನ್ನು ಪ್ರಾರಂಭಿಸಲಾಯಿತು.

**ಸಭೆಯ ಕಾರ್ಯಸೂಚಿಗಳು**

1. **ಪ್ರಾರ್ಥನೆ:**-ಸಂಘದ ಸದಸ್ಯರಾದ ಶ್ರೀಯುತ ಆಂಜನಪ್ಪ ರವರ ಗಣೇಶ ಸ್ತುತಿಯೊಂದಿಗೆ ದೇವತಾ ಪಾರ್ಥನೆಯನ್ನು ನಡೆಸಿ ದೀಪ ಬೆಳಗಿಸಿ ಸಭೆಯನ್ನು ಪ್ರಾರಂಭಿಸಲಾಯಿತು.
2. **ಸ್ವಾಗತಭಾಷಣ:**- ಸಂಘದ ನಿರ್ದೇಶಕರಾದ ಶ್ರೀಯುತ ಸಿದ್ಧರಂಗಯ್ಯನವರು ಸಭೆಗೆ ಆಗಮಿಸಿದ ಸರ್ವ ಸದಸ್ಯರನ್ನು ಮತ್ತು ಸಹ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಅಂತೆಯೇ ಸಂಘದ ಅಧ್ಯಕ್ಷರಿಗೂ, ಉಪಾಧ್ಯಕ್ಷರಿಗೂ ಹಾಗೂ ಆಡಳಿತ ಮಂಡಳಿ ನಿರ್ದೇಶಕರಿಗೂ, ಸಂಘದ ಸಿಬ್ಬಂಧಿ ವರ್ಗದವರಿಗೂ ಹೃದಯ ಪೂರ್ವಕ ಸ್ವಾಗತ ಮಾಡಿದರು. ಸದಸ್ಯರೆಲ್ಲರೂ ಶಾಂತ ರೀತಿಯಿಂದ ಸಭೆಯನ್ನು ಯಶಸ್ವಿಗೊಳಿಸುವಂತೆ ತಿಳಿಸಿದರು.
3. **ಇಂದಿನ ಸಭೆಯ ಕಾರ್ಯಕ್ರಮದ ಸೂಚನಾ ಪತ್ರವನ್ನು ಸಭೆಯಲ್ಲಿ ಓದಿ ರೆಕಾರ್ಡ ಮಾಡುವುದು:**- ಸಂಘದ ಕಾರ್ಯದರ್ಶಿ ಶ್ರೀಮತಿ ಗೀತಾ ಟಿ.ಕೆ ರವರು ಸಭೆಯ ಸೂಚನಾಪತ್ರವನ್ನು ಮತ್ತು ಹೊಸದಾಗಿ ಸೇರ್ಪಡಿಯಾಗಿರುವ ಇತರೆ ಕಾರ್ಯಸೂಚಿಗಳನ್ನು ಸಭೆಯಲ್ಲಿ ಓದಿದರು.. ಸಭೆಯು ಅದನ್ನು ದಾಖಲು ಮಾಡಬಹುದೆಂದು ಅನುಮೋದಿಸಿತು.
4. **2023-24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ನಡುವಳಿಯ ಅನುಮೋದನೆ:**-ಸಂಘದ ಕಾರ್ಯದರ್ಶಿ ಅವರು 2023-24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯನ್ನು ಸಭೆಯಲ್ಲಿ ಮಂಡಿಸಿದರು. ಸಭೆಯು ಮಂಡಿಸಿದ ನಡವಳಿಯನ್ನು ಸರ್ವಾನುಮತದಿಂದ ಅನುಮೋದಿಸಿತು.
5. **2024-25 ನೇ ಸಾಲಿನ ಆಡಳಿತ ವರದಿ ಮಂಡನೆ ಹಾಗೂ ಅನುಮೋದನೆ:**- ಸಂಘದ ಅಧ್ಯಕ್ಷರು 2024-25 ನೇ ಸಾಲಿನ ಆಡಳಿತ ಸಂಪೂರ್ಣ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ಸದರಿ ಸಾಲಿನಲ್ಲಿ ಸಂಘದ ವತಿಯಿಂದ ಕೈಗೊಂಡ ಕಾರ್ಯಕ್ರಮದ ಬಗ್ಗೆ, ಬಡಾವಣೆಗಳ ಅಭಿವೃದ್ಧಿಯ ಬಗ್ಗೆ ಹಾಗೂ ಆಗಿರುವ ಪ್ರಗತಿಯನ್ನು, ಅಲ್ಲದೆ ಧನಾತ್ಮಕ ಚಟುವಟಿಕೆಗಳನ್ನು ಸಭೆಗೆ ವಿವರಿಸಿದರು. ಮಂಡಿಸಿರುವ ಸದರಿ ಆಡಳಿತ ವರದಿಗೆ ಸಭೆಯ ಅನುಮೋದನೆಯನ್ನು ಕೋರಿದರು. ಸಭೆಯಲ್ಲಿ ಸದಸ್ಯರು 2024-25 ನೆ ಸಾಲಿನ

ಆಡಳಿತ ವರದಿಯನ್ನು ಅನುಮೋದಿಸಿದರು.

6. **ಸಂಘದ 2024-25 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ:-** ಸಂಘದ 2024-25 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರದ ವರದಿಯನ್ನು ಸಭೆಯಲ್ಲಿ ಸಂಘದ ಕಾರ್ಯದರ್ಶಿಯವರು ಮಂಡಿಸಿದರು. ನಂತರ ನಿರೂಪಕರಾದ ಪ್ರಸಾದ್ ರವರು 2024-25 ನೆ ಸಾಲಿನ ಪರಿಶೋಧಿತ ಲೆಕ್ಕಪತ್ರಗಳಿಗೆ ಸಭೆಯ ಅನುಮೋದನೆ ಕೇಳಿದರು. ನಂತರ ಚಪ್ಪಾಳೆಗಳ ಮುಖಾಂತರ ಸದಸ್ಯರು ಅನುಮೋದನೆ ನೀಡಿದರು.

7. **ಸಂಘದ 2025-26 ನೇ ಸಾಲಿನ ಮುಂಗಡಪತ್ರ ಮಂಡನೆ ಹಾಗು ಅನುಮೋದನೆ**:-2025-26 ನೇ ಸಾಲಿಗಾಗಿ ಮುಂಗಡ ಪತ್ರವನ್ನು ಮತ್ತು 2024-25 ರ ವಾಸ್ತವಿಕ ಆಯವ್ಯಯದ ಬಗ್ಗೆ ಮತ್ತು ಅನುಮೋದಿತ ಆಯವ್ಯಯಕ್ಕಿಂತ ಹೆಚ್ಚು ಖರ್ಚಾಗಿರುವ ಬಗ್ಗೆ ವಿವರಣೆಯನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು. ಸಭೆಯಲ್ಲಿ ಮಂಡಿಸಿದ 2024-25 ನೇ ಸಾಲಿನ ವಾಸ್ತವಿಕ ಖರ್ಚು ಮತ್ತು 2025-26ನೆ ಸಾಲಿನ ಮುಂಗಡಪತ್ರಕ್ಕೆ ಸಭೆಯಲ್ಲಿ ಸದಸ್ಯರು ಸರ್ವಾನುಮತದಿಂದ ಅನುಮೋದನೆ ನೀಡಿದರು.

8. **ಸಂಘಕ್ಕೆ 2025-26 ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಕ್ಕೆ ಅನುಮೋದನೆ**:- 2025-26 ನೇ ಸಾಲಿಗೆ ಲೆಕ್ಕ ಪರಿಷೋಧಕರಾಗಿ ಡಿ.ಬಿ ಸಜ್ಜನರ್ ಅಂಡ್ ಕೋ ಇವರನ್ನು ನೇಮಕಮಾಡಿಕೊಳ್ಳಲು ಸಭೆಯ ಅನುಮೋದನೆಯನ್ನು ಕೋರಲಾಯಿತು. ಸಭೆಯಲ್ಲಿ ಸದಸ್ಯರು ಕೈಗಳನ್ನು ಮೇಲೆ ಎತ್ತುವುದರ ಮುಖಾಂತರ ಸರ್ವಾನುಮತದಿಂದ ಅನುಮೋದನೆ ನೀಡಿದರು.

9. **ಬಡಾವಣೆಗಳ ಜಾಗ ಬದಲಾವಣೆ ಮಾಡುವುದರ ಬಗ್ಗೆ**:- ಉಪಾಧ್ಯಕ್ಷರಾದಂತಹ ಚಂದ್ರಪ್ಪ ನವರು ಮಾತನಾಡಿ ಸಂಘದ ಎಲ್ಲಾ ಬಡಾವಣೆಗಳಲ್ಲಿಯೂ ಕೂಡ ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಆಗುವಷ್ಟು ಭೂಮಿಯು ಸ್ವಾಧಿನವಾಗಿಲ್ಲದೆ ಇರುವುದರಿಂದ ಹಾಗೂ ಬಡಾವಣೆಗಳ ಕೆಲವು ಜಾಗದಲ್ಲಿ ಭೂ ವಿವಾದಗಳಾಗಿರುವುದರಿಂದ ಮತ್ತು ಹೊಂದಕ್ಕೊಂದು ಹೊಂದಾಣಿಕೆ ಇಲ್ಲದೆ ಇರುವುದರಿಂದ ಜಾಗ ಬದಲಾವಣೆ ಮಾಡಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಿ, ಬಡಾವಣೆಯಯಲ್ಲಿ ನಿವೇಶನಕ್ಕಾಗಿ ನೋಂದಾಯಿಸಿರುವ ಬಡಾವಣೆವಾರು ಸದಸ್ಯರ ಜೊತೆಯಲ್ಲಿ ಕೂಡ ಸಭೆ ನಡೆಸಿರುತ್ತೇವೆ. ಸದರಿ ಕಾರ್ಯಸೂಚಿಯನ್ನು ನಿಮ್ಮ ಮುಂದೆ ಪ್ರಸ್ತಾಪ ಮಾಡುತ್ತಿದ್ದೇವೆ ಎಂದು ಸಭೆಯಲ್ಲಿ ಪ್ರಸ್ತುತ ಸ್ಥಿತಿಯನ್ನು ವಿವರಿಸಿ ಸಭೆಯಲ್ಲಿ ಅನುಮೋದನೆ ಕೇಳಿದರು. ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

10. **ನಿವೇಶನ ದರ ಪರಿಷ್ಕರಣೆ** :- ಸಂಘದವತಿಯಿಂದ ಪ್ರಾಯೋಜಿಸಲಾಗಿರುವ ಯೋಜನೆಗಳಲ್ಲಿ ಎಲ್ಲಾ ಬಡಾವಣೆಗಳು ಕೂಡ ಬಹಳ ವರ್ಷಗಳ ಹಿಂದೆ ಪ್ರಾರಂಭ ಮಾಡಿದ್ದು ಯೋಜನೆಗಳಿಗಾಗಿ ಭೂಸ್ವಾದೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ, ಹಾಗಾಗಿ ಎಲ್ಲಾ ಬಡಾವಣೆಯಲ್ಲಿಯೂ ಮೊದಲು ಮಾಡಿದ ದರಗಳನ್ನು ಪರಿಷ್ಕರಣೆ ಮಾಡದೆ ವಿಧಿಯಿಲ್ಲ. ಹಾಗಾಗಿ ನಿವೇಶನಗಳ ದರ ಪರಿಷ್ಕರಣೆಗಾಗಿ ಶ್ರೀಯುತ ಉಪಾಧ್ಯಕ್ಷರಾದಂತಹ ಚಂದ್ರಪ್ಪ ನವರು ಸಭೆಯ ಅನುಮತಿ ಕೋರಿದರು.

    ಸಭೆಯಲ್ಲಿ ಹಾಜರಿದ್ದ ಸಂಘದ ಬಡಾವಣೆಗಳಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಸಹ ಸದಸ್ಯರು ಮಾತನಾಡಿ ದರ ಪರಿಷ್ಕರಣೆಗೆ ನಾವು ಯಾರು ಅನುಮೋದನೆ ನೀಡುವುದಿಲ್ಲ. ಬಡಾವಣೆಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಸದಸ್ಯರುಗಳಲ್ಲಿ ಅತೀ ಹೆಚ್ಚು ಸಹಸದಸ್ಯರೆ ಆಗಿರುವುದರಿಂದ ದರ ಹೆಚ್ಚಳ ಮಾಡುವ ಬಗ್ಗೆ ಬಡಾವಣೆವಾರು ಸಭೆ ಕರೆದು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಿ ಎಂದು ಸಭೆಯಲ್ಲಿ ಅವರ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಉಪಾಧ್ಯಕ್ಷರಾದ ಚಂದ್ರಪ್ಪ ಅವರು ಮಾತನಾಡಿ ನಿವೇಶನ ದರ ಪರಿಷ್ಕರಣೆಗಾಗಿ ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆದಿರುತ್ತೇವೆ. ಖರ್ಚುವೆಚ್ಚಗಳ ಲೆಕ್ಕದ ಬಗ್ಗೆ ಬಡಾವಣೆಯ ಕೆಲಸಗಳು ಪೂರ್ಣಗೊಂಡ ನಂತರದಲ್ಲಿ ತಿಳಿಯುತ್ತದೆ. ಆಗ ಖರ್ಚುವೆಚ್ಚಗಳ ಬಗ್ಗೆ ಲೆಕ್ಕ ಮಾಡಿ

ಬಡಾವಣೆವಾರು ಸದಸ್ಯರೊಂದಿಗೆ ಚರ್ಚಿಸಿ ಆಡಳಿತ ಮಂಡಳಿಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಸಭೆಯಲ್ಲಿ ವಿವರಿಸಿ ತಿಳಿಸಿದರು.

ನಂತರ ಸಭೆಯಲ್ಲಿ ಸದಸ್ಯರು ವಿವೇಚನೆಯಿಂದ ಹಾಗೂ ನ್ಯಾಯಯುತವಾಗಿ ಸದಸ್ಯರಿಗೆ ಹೊರೆಯಾಗದಂತೆ ದರ ಪರಿಷ್ಕರಣೆ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ಅನುಮೋದಿಸಿದರು.

11. **ಸಂಘದ ಬಡಾವಣೆಗಳ ಭೂ ಅಭಿವೃದ್ಧಿದಾರರು ಮತ್ತು ಸಂಘದ ಜಮೀನುಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳ ಬಗ್ಗೆ ಚರ್ಚೆ**:-ಉಪಾಧ್ಯಕ್ಷರಾದಂತಹ ಚಂದ್ರಪ್ಪ ನವರು ಮಾತನಾಡಿ ಸಂಘದ ಬಡಾವಣೆಗಳಿಗೆ ಸಂಬಂಧಪಟ್ಟಂತೆ ಏರೋಪಾರ್ಕ ರೆಸಿಡೆನ್ಸಿ ಬಡಾವಣೆಯ ಭೂ ಅಭಿವೃದ್ಧಿದಾರರಾದ ಲಕುಮೇಶ್ ಡೆವಲಪರ್, ನೆಲಮಂಗಲ ಮಾಧವನಗರ ಬಡಾವಣೆಯ ಓರ್ನಿಕಾ ಡೆವಲಪರ್ಸ್, ಮತ್ತು ರಾಜ್ ರೆಸಿಡೆನ್ಸಿ ಬಡಾವಣೆಯ ಅಭಿವೃದ್ಧಿದಾರರಾದ ಸಿ.ಎಮ್.ಆರ್ ಸ್ಕ್ವೇರ್ ಅವರ ಮೇಲೆ ಕಾನೂನು ಮುಖಾಂತರ ಸಂಬಂಧಪಟ್ಟ ನ್ಯಾಯಾಲಯ/ಪ್ರಾಧಿಕಾರಗಳಲ್ಲಿ ಕ್ರಮ ಕೈಗೊಂಡಿದ್ದೇವೆ. ವಕೀಲರ ಮಾರ್ಗದರ್ಶನದಂತೆ ಮುಂದುವರೆಯುತ್ತೇವೆ. ಸಂಘಕ್ಕೆ ಸ್ಪಂದಿಸದೆ ಇರುವ ಡೆವಲಪರ್ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು.

ನೆಲಮಂಗಲ ಮಾಧವನಗರ ಬಡಾವಣೆಯ ಜಮೀನುಗಳಿಗೆ ಸಂಬಂಧಪಟ್ಟಂತೆ ದಾವೆಗಳಾಗಿರುವ ಬಗ್ಗೆ ವಿವರಣೆಯನ್ನು ಆಡಳಿತ ವರದಿಯಲ್ಲಿ ವರದಿಸಿದ್ದೇವೆ. ನ್ಯಾಯಾಲಯದಲ್ಲಿ ಭೂಮಿಗೆ ಸಂಬಂಧಪಟ್ಟ ಪ್ರಕರಣಗಳು ಬೇಗ ಮುಕ್ತಾಯ ಆಗುವುದಿಲ್ಲ. ದಾವೆ ಹೂಡಿರುವವರ ಜೊತೆ ರಾಜೀ ಮಾಡಿಕೊಳ್ಳುವುದಕ್ಕೆ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿ ಇಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ಮುಂದುವರೆಯುವುದು ಎಂದು ತೀರ್ಮಾನಿಸಿದ್ದೇವೆ. ಹಾಗಾಗಿ ನೆಲಮಂಗಲ ಬಡಾವಣೆಗೆ ಸಂಬಂಧಪಟ್ಟ ಹಾಗೆ ಕೇಸ್ ದಾಖಲಿಸಿರುವವರು ರಾಜೀ ಮಾಡಿಕೊಳ್ಳುವುದಕ್ಕೆ ಮುಂದೆ ಬಂದರೆ ರಾಜೀ ಮಾಡಿಕೊಳ್ಳಲು ಸಭೆಯ ಅನುಮೋದನೆಯನ್ನು ಉಪಾಧ್ಯಕ್ಷರು ಕೇಳಿದರು. ರಾಜೀ ಮಾಡಿಕೊಳ್ಳುವುದಕ್ಕೆ ಸಭೆಯಲ್ಲಿ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

12. **ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸತಕ್ಕ ಇತರ ವಿಷಯಗಳು;-** ಉಪಾಧ್ಯಕ್ಷರಾದ ಚಂದ್ರಪ್ಪ ರವರು ಮಾತನಾಡಿ ಹೊಸದಾಗಿ ಸೇರ್ಪಡಿಯಾಗಿರುವ ಇತರೆ ಕಾರ್ಯಸೂಚಿಗಳ ಬಗ್ಗೆ ಸಭೆಯಲ್ಲಿ ತಿಳಿಸಿದರು

**a) NOC ಪಡೆಯಲು ದರ ಹೆಚ್ಚಳ ಮಾಡುವ ಬಗ್ಗೆ**:- ಉಪಾಧ್ಯಕ್ಷರಾದ ಚಂದ್ರಪ್ಪ ರವರು ಮಾತನಾಡಿ ಸಂಘದ ಕೆಲವು ಬಡಾವಣೆಗಳಲ್ಲಿ ಸದಸ್ಯರಿಗೆ ಈಗಾಗಲೆ ನಿವೇಶನಗಳನ್ನು ನೋಂದಾಯಿಸಿಕೊಟ್ಟಿರುತ್ತೇವೆ. ನಿವೇಶನ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಅವಶ್ಯಕತೆ ಇದ್ದಲ್ಲಿ NOC ತೆಗೆದುಕೊಳ್ಳಲು ಪ್ರಸ್ಥುತ ಚದುರಡಿಗೆ ರೂ 25/- (ಇಪ್ಪತ್ತೈದು ರೂಪಾಯಿಗಳು ಮಾತ್ರ) ದರ ಇದೆ. ಸಂಘದಲ್ಲಿ ಖರ್ಚವೆಚ್ಚಗಳು ಅಧಿಕವಾಗಿರುವುದರಿಂದ ಸದರಿ ದರವನ್ನು ಹೆಚ್ಚಳ ಮಾಡಲು ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಿದ್ದೇವೆ. ಅದಕ್ಕಾಗಿ ರೂ 10/- (ಹತ್ತು ರೂಪಾಯಿಗಳು ಮಾತ್ರ) ದರ ಹೆಚ್ಚಳ ಮಾಡಲು ಸಭೆಯ ಅನುಮೋದನೆಯನ್ನು ಕೋರುತ್ತಿದ್ದೇವೆ ಎಂದು ಸಭೆಯಲ್ಲಿ ವಿವರಿಸಿ ತಿಳಿಸಿದರು. ನಂತರ ಸಭೆಯಲ್ಲಿ ಎಲ್ಲರೂ ಚರ್ಚಿಸಿ ಸಂಘದಿಂದ NOC ಪಡೆಯಲು ರೂ 10/- (ಹತ್ತು ರೂಪಾಯಿಗಳು ಮಾತ್ರ) ದರ ಹೆಚ್ಚಳ ಮಾಡಲು ಸದಸ್ಯರು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿದರು.

**b) ಸಂಘದ ವಿಠ್ಠಲನಗರ ಬಡಾವಣೆಯ ದರ ಹೆಚ್ಚಳ ಮಾಡುವ ಬಗ್ಗೆ**:- ಉಪಾಧ್ಯಕ್ಷರಾದ ಚಂದ್ರಪ್ಪ ರವರು ಮಾತನಾಡಿ ಸಂಘದ ವಿಠ್ಠಲನಗರ ಬಡಾವಣೆಯಲ್ಲಿ ೯೦ ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಿ ಸುಮಾರು 59 ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗಿದೆ. ಪ್ರಸ್ತುತ ಬಡಾವಣೆಯನ್ನು ಡೆವಲಪರ್ ಅವರು ರೀ ಫಾರ್ಮೇಶನ್ ಮಾಡಿರುವುದರಿಂದ ಹೆಚ್ಚು ಖರ್ಚುವೆಚ್ಚಗಳು ಬಂದಿದ್ದು ಅದಕ್ಕಾಗಿ ದರ ಹೆಚ್ಚಳ ಮಾಡಿಕೊಡುವಂತೆ ಸಂಘಕ್ಕೆ ಮನವಿ ಮಾಡಿದ್ದಾರೆ. ಹೀಗಾಗಲೆ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿ

ಸುಮಾರು 59 ನಿವೇಶನಗಳನ್ನು ನೋಂದಣಿ ಮಾಡಿಕೊಟ್ಟಿರುವುದರಿಂದ ಎಲ್ಲಾ ಸದಸ್ಯರನ್ನು ಸಭೆ ಕರೆಯುತ್ತೇವೆ. ಸದಸ್ಯರ ಬಳಿ ನೀವೆ ಮಾತನಾಡಿ ಎಂದು ಅವರಿಗೆ ತಿಳಿಸಿದ್ದೇವೆ. ಹಾಗಾಗಿ ಸದಸ್ಯರ ಜೊತೆ ಚರ್ಚೆ ಮಾಡಿ ಡೆವಲಪರ್ ಅವರಿಗೆ ದರ ಹೆಚ್ಚಳ ಮಾಡಿ ಕೊಡಲು ಸಭೆಯ ಅನುಮೋದನೆಯನ್ನು ಕೋರಿದರು. ಸದಸ್ಯರ ಜೊತೆ ಚರ್ಚಿಸಿ ನ್ಯಾಯಯುತವಾಗಿ ದರ ಹೆಚ್ಚಳ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡಿ ಸದಸ್ಯರು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿದರು.

c) **ಸಂಘದ ಬಡಾವಣೆಗಳಲ್ಲಿ ಒಂದು ಕಂತನ್ನು ಪಾವತಿಸಿರುವ ಸದಸ್ಯರಿಗೆ ರೀಫಂಡ್ ಮಾಡುವ ಬಗ್ಗೆ:-** ಉಪಾಧ್ಯಕ್ಷರಾದ ಚಂದ್ರಪ್ಪ ರವರು ಮಾತನಾಡಿ ಸಂಘವು ಅಭಿವೃದ್ಧಿ ಪಡಿಸುತ್ತಿರುವ ಎಲ್ಲಾ ಬಡಾವಣೆಗಳಲ್ಲಿ ಕೆಲವು ಸದಸ್ಯರು ಕೇವಲ ಒಂದು ಕಂತನ್ನು ಪಾವತಿಸಿ ಬಾಕಿ ಕಂತನ್ನು ಪಾವತಿಸಿರುವುದಿಲ್ಲ. ಸಂಘದಿಂದ 2 ನೇ ಕಂತನ್ನು ಪಾವತಿಸಲು ತಿಳಿಸಿದಾಗ ಅವರು ಬಾಕಿ ಕಂತನ್ನು ಸಂಘಕ್ಕೆ ಪಾವತಿಸಿರುವುದಿಲ್ಲ. ಪ್ರಸ್ಥುತ ಜಮೀನಿನ ಬೆಲೆ ಗಗನಕ್ಕೇರಿರುವುದರಿಂದ ಕೇವಲ ಒಂದು ಕಂತನ್ನು ಪಡೆದು ಭೂಮಿ ಖರೀದಿಸಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಿ ಒಂದು ಕಂತನ್ನು ಪಾವತಿಸಿರುವ ಸದಸ್ಯರಿಗೆ ನಿವೇಶನ ಹೊದಗಿಸಲು ಸಾಧ್ಯವಾಗುವುದಿಲ್ಲ. ಒಂದು ಕಂತನ್ನು ಪಾವತಿಸಿರುವ ಸದಸ್ಯರಿಗೆ ಸಂಘದಿಂದ ಇನ್ನೊಮ್ಮೆ ಬಾಕಿ ಕಂತನ್ನು ಪಾವತಿಸುವಂತೆ ನೋಟೀಸ್ ಕಳಿಸುತ್ತೇವೆ. ಆಗಲೂ ಅವರು ಸಂಘಕ್ಕೆ ಬಾಕಿ ಕಂತನ್ನು ಪಾವತಿಸದೆ ಇದ್ದಲ್ಲಿ ಅಂತಹ ಸದಸ್ಯರಿಗೆ ಅವರು ಪಾವತಿಸಿರುವ ಹಣವನ್ನು ಸದಸ್ಯರಿಗೆ ರೀಫಂಡ್(ಮರುಪಾವತಿ) ಮಾಡಲು ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಿ ಇಂದಿನ ಸಭೆಯಲ್ಲಿ ಅನುಮೋದನೆಗಾಗಿ ನಿಮ್ಮ ಮುಂದೆ ಪ್ರಸ್ತಾಪ ಮಾಡುತ್ತಿದ್ದೇವೆ. ಎಂದು ಸಭೆಯ ಅನುಮೋದನೆ ಕೇಳಿದರು. ಎಲ್ಲರೂ ಚರ್ಚಿಸಿದ ನಂತರ ಸಭೆಯಲ್ಲಿ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

d) **ನಿಧನ ಹೊಂದಿರುವ ಸಂಘದ ಸದಸ್ಯರ ಷೇರು ಹಣವನ್ನು ಸಂಘಕ್ಕೆ ಹಾಕಿಕೊಳ್ಳುವ ಬಗ್ಗೆ:-** ಉಪಾಧ್ಯಕ್ಷರಾದ ಚಂದ್ರಪ್ಪ ರವರು ಮಾತನಾಡಿ ಸಂಘದ ಹಲವಾರು ಸದಸ್ಯರು ನಿಧನರಾಗಿದ್ದು ಅವರ ಷೇರು ಹಣವು ಸಂಘದಲ್ಲಿ ಇರುತ್ತದೆ. ನಿಧನರಾಗಿರುವ ಸಂಘದ ಸದಸ್ಯರ ಕುಟುಂಬದ ಸದಸ್ಯರು ಅವರ ನಿಧನ ಪ್ರಮಾಣ ಪತ್ರದೊಂದಿಗೆ ಲಿಖಿತ ಪತ್ರವನ್ನು ಸಂಘಕ್ಕೆ ನೀಡಿ ಷೇರು ಹಣವನ್ನು ಹಿಂಪಡೆಯಬೇಕಾಗಿರುತ್ತದೆ. ಸಂಘದಲ್ಲಿ ಇರುವ ನಿಧನರಾಗಿರುವ ಸದಸ್ಯರ ವಿಳಾಸಕ್ಕೆ ಷೇರು ಹಣವನ್ನು ವಾಪಸ್ಸು ಪಡೆಯಲು ಸಂಘದಿಂದ ಪತ್ರ ಕಳಿಸುತ್ತೇವೆ. ಮರಣ ಹೊಂದಿರುವ ಕುಟುಂಬದ ಸದಸ್ಯರಿಗೆ ಮಾರ್ಚ್ 10 2026 ರ ವರೆಗೆ ಸಮಯಾವಕಾಶ ನೀಡುತ್ತೇವೆ. ಆಗಲೂ ಯಾರೂ ಬರದೆ ಇದ್ದಲ್ಲಿ ಅಂತಹ ಸದಸ್ಯರ ಷೇರು ಹಣವನ್ನು ಸಂಘಕ್ಕೆ ಹಾಕಿಕೊಳ್ಳುತ್ತೇವೆ. ಎಂದು ಸಭೆಯ ಅನುಮೋದನೆ ಕೋರಿದರು. ಅದಕ್ಕೆ ಸಭೆಯಲ್ಲಿ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

e) **ವಾರಸುದಾರರಿಲ್ಲದ ನಿವೇಶನ ಮುಂಗಡ ಹಣದ ರಸೀದಿ ಸರಿಪಡಿಸಿಕೊಳ್ಳುವ ಬಗ್ಗೆ:-** ಉಪಾಧ್ಯಕ್ಷರಾದ ಚಂದ್ರಪ್ಪ ರವರು ಮಾತನಾಡಿ ಸಂಘದ ಬಡಾವಣೆಯ ಸದಸ್ಯರು ಹಣವನ್ನು ಸಂಘದ ಖಾತೆಗೆ ಸಂದಾಯ ಮಾಡಿ ಸಂಘದ ಗಮನಕ್ಕೆ ತರದೆ ಇದ್ದುದರಿಂದ ಆ ಹಣವನ್ನು ವಾರಸುದಾರರಿಲ್ಲದ ನಿವೇಶನ ಮುಂಗಡ ಖಾತೆಗೆ ಸಂದಾಯ ಮಾಡಿಕೊಳ್ಳಲಾಗಿದೆ. ಹಾಗಾಗಿ ಆ ಹಣದ ರಸೀದಿಗಳನ್ನು ಸರಿಪಡಿಸಿಕೊಂಡು ಋಣಾತ್ಮಕ ರಸೀದಿಗಳ ಸಮತೋಲನ ಮಾಡಿಕೊಳ್ಳಲು ಉಪಾಧ್ಯಕ್ಷರಾದ ಚಂದ್ರಪ್ಪನವರು ಸಭೆಯ ಅನುಮೋದನೆ ಕೋರಿದರು. ರಸೀದಿಗಳನ್ನು ಸರಿಪಡಿಸಿಕೊಂಡು ಋಣಾತ್ಮಕ ರಸೀದಿಗಳ ಸಮತೋಲನ ಮಾಡಿಕೊಳ್ಳಲು ಸಭೆಯಲ್ಲಿ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

**ಅಧ್ಯಕ್ಷರಾದ ಶ್ರೀಯುತ ಎಸ್. ಸುಬ್ರಮಣಿಯವರು ರವರು ಮಾತನಾಡಲು ಇಚ್ಚಿಸುವ ಸದಸ್ಯರಿಂದ ಹಾಗೂ ಅವರ ಅನಿಸಿಕೆಗಳನ್ನು ವ್ಯಕ್ತಪಡಿಸಲು ಇಚ್ಚಿಸುವವರನ್ನು ಮಾತನಾಡಲು ತಿಳಿಸಿದರು. ಸದಸ್ಯರು ಕೇಳುವ ಪ್ರಶ್ನೆಗಳಿಗೆ ನಾವು ಉತ್ತರ ಕೊಡುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು.**

- ಸಂಘದ ಸದಸ್ಯರಾದ ಶ್ರೀಯುತ ಜಯಪ್ರಕಾಶ್ (ಸದಸ್ಯತ್ವ ಸಂಖ್ಯೆ-459) ಅವರು ಮಾತನಾಡಿ ನಾನು

ನೆಲಮಂಗಲ ಬಡಾವಣೆಯಲ್ಲಿ ನಿವೇಶನಕ್ಕಾಗಿ ನೋಂದಾಯಿಸಿದ್ದೇನೆ. 14 ವರ್ಷಗಳಾದರು ನಮಗೆ ನಿವೇಶನ ನೋಂದಾಯಿಸಿ ಕೊಟ್ಟಿಲ್ಲ. ಆಡಳಿತ ವರದಿಯಲ್ಲಿ ವಿವರಿಸಿರುವುದನ್ನು ನೋಡಿದರೆ ಸಂಘದ ಜಮೀನುಗಳ ಮೇಲೆ ನ್ಯಾಯಾಲಯಗಳಲ್ಲಿ ದಾವೆಗಳಾಗಿವೆ. ಇವರು ಲೀಗಲ್ ನೋಡದೆ ಭೂಮಿ ಖರೀದಿ ಮಾಡಿರುವುದರಿಂದ ಇಷ್ಟು ಸಮಸ್ಯೆಗಳಾಗವೆ. ಆಡಳಿತ ಮಂಡಳಿ ಮತ್ತು ಡೆವಲಪರ್ ಅವರು ಮೂಲದಲ್ಲಿಯೆ ದಾಖಲೆಗಳನ್ನು ಸರಿಯಾಗಿ ನೋಡಿಕೊಂಡಿದ್ದರೆ ಆಗಲೆ ಪರಿಹಾರ ಮಾಡಿಕೊಳ್ಳಬಹುದಿತ್ತು. ಇದರಿಂದಾಗಿ ಬಡಾವಣೆಯ ಅಭಿವೃದ್ಧಿಯು ವಿಳಂಬವಾಗಿದೆ. ಹಾಗಾಗಿ ಇದರ ಬಗ್ಗೆ ಶೀರ್ಷವಾಗಿ ಒಂದು ತೀರ್ಮಾನಕ್ಕೆ ಬಂದು ದಾವೆಗಳನ್ನು ಪರಿಹರಿಸಿಕೊಂಡು ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವುದರ ಕಡೆ ಹೆಚ್ಚು ಗಮನ ಹರಿಸಿ ಎಂದು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಉಪಾಧ್ಯಕ್ಷರಾದ ಚಂದ್ರಪ್ಪ ಅವರು ಮಾತನಾಡಿ ನೆಲಮಂಗಲ ಬಡಾವಣೆಯ ಮೊದಲನೆ ಹಂತದಲ್ಲಿ ಇರುವ ಸಮಸ್ಯೆಯನ್ನು ಬಗೆಹರಿಸಿ ಶೀರ್ಘವಾಗಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುತ್ತೇವೆ. ಮೊದಲನೆ ಹಂತದ ನಿವೇಶನಗಳ ಹಂಚಿಕೆಯಾದ ನಂತರ ಎರಡನೆ ಹಂತದ ಅಭಿವೃದ್ಧಿಯು ಕೂಡ ಪ್ರಾರಂಭವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

- ನಂತರ ಸಂಘದ ಟೌನ್‌ಶಿಪ್ ಬಡಾವಣೆಯ ಸಹಸದಸ್ಯರಾದ ಮಧುಸೂದನ್ ಗುಡಿ ಅವರು ಮಾತನಾಡಿ ನಾನು ಟೌನ್‌ಶಿಪ್ ಬಡಾವಣೆಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ. 2024 ರಲ್ಲಿ ಸಭೆ ನಡೆಸಿ ಇನ್ನು 18 ತಿಂಗಳಲ್ಲಿ ಪ್ರಾಜಕ್ಟ್ ಕಂಪ್ಲೀಟ್ ಮಾಡಿ ಕೊಡುತ್ತೇವೆ ಎಂದು ಪತ್ರ ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಪ್ರಾಜಕ್ಟ್ ಕಂಪ್ಲೀಟ್ ಮಾಡಿಲ್ಲ. ಹಾಗಾದರೆ ಈ ಪತ್ರಕ್ಕೆ ಬೆಲೆ ಇಲ್ಲವಾ ಎಂದು ಸಭೆಯಲ್ಲಿ ಕೇಳಿದರು. ಅದಕ್ಕೆ ಉಪಾಧ್ಯಕ್ಷರಾದ ಚಂದ್ರಪ್ಪ ಅವರು ಮಾತನಾಡಿ ಟೌನ್ ಶಿಪ್ ಬಡಾವಣೆಯಲ್ಲಿ 233 ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಿ ನೋಂದಾಯಿಸಿದ್ದೇವೆ. ನಂತರ 4 ಎಕರೆ ಭೂಮಿಯ ನಕ್ಷೆ ಅನುಮೋದನೆಗಾಗಿ ಬೈಯಪ್ಪಾಗೆ ಅರ್ಜಿ ಸಲ್ಲಿಸಿದ್ದೇವೆ. ಶೀಘ್ರವಾಗಿ ಬಡಾವಣೆಯ ಕಾಮಗಾರಿ ಕೆಲಸ ಪ್ರಾರಂಭ ಮಾಡುತ್ತೇವೆ. ಉಳಿದ ಜಾಗಗಳು ಹೊಂದಕ್ಕೊಂದು ಹೊಂದಾಣಿಕೆ ಆಗದೆ ಇರುವುದರಿಂದ ವಿಳಂಬ ಆಗುತ್ತಿದೆ. ಈಗಾಗಲೆ ಬೇರೆ ಜಾಗವನ್ನು ಗುರುತಿಸಿದ್ದೇವೆ. ಆದಷ್ಟು ಬೇಗ ಜಾಗಗಳನ್ನು ಸಂಘದ ಹೆಸರಿಗೆ ನೋಂದಾಯಿಸಲು ಡೆವಲರ್ ಅವರಿಗೆ ತಿಳಿಸಿದ್ದೇವೆ. ಇನ್ನು ಎರಡು ವರ್ಷದಲ್ಲಿ ಎಲ್ಲಾ ಸದಸ್ಯರಿಗೂ ನಿವೇಶನ ಹಂಚಿಕೆ ಮಾಡುತ್ತೇವೆ. ಅದರಂತೆ ನಾವು ನಡೆದುಕೊಳ್ಳುತ್ತೇವೆ ಎಂದು ಸಭೆಯಲ್ಲಿ ವಿವರಣೆ ನೀಡಿದರು.

- ನಂತರ ಸಂಘದ ರೆಸಿಡೆನ್ಸಿ ಬಡಾವಣೆಯ ಸಹಸದಸ್ಯರಾದ ವಿಟ್ಟಲ್‌ರಾವ್ ಅವರು ಮಾತನಾಡಿ ನಾನು ರೆಸಿಡೆನ್ಸಿ ಬಡಾವಣೆಯಲ್ಲಿ ನಿವೇಶನಕ್ಕಾಗಿ ನಾನು ಅರ್ಜಿ ಸಲ್ಲಿಸಿದ್ದೇನೆ. ಜಾಗ ಬದಲಾವಣೆ ಮಾಡುವ ಬಗ್ಗೆ ಮತ್ತು ದರ ಪರಿಷ್ಕರಣೆಯ ಬಗ್ಗೆ ಬಡಾವಣೆವಾರು ಸದಸ್ಯರ ಜೊತೆ ಚರ್ಚಿಸಿ ಅನುಮೋದನೆ ಪಡೆದು ಮುಂದುವರೆಯಿರಿ. ರೆಸಿಡೆನ್ಸಿ ಬಡಾವಣೆಯ ಸದಸ್ಯರಿಗಾಗಿ ಜಾಗಗಳನ್ನು ಸಂಘದ ಹೆಸರಿಗೆ ನೋಂದಾಯಿಸಿ ಎಂದು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಉಪಾಧ್ಯಕ್ಷರಾದ ಚಂದ್ರಪ್ಪ ಅವರು ಮಾತನಾಡಿ ಜಾಗಗಳನ್ನು ಸಂಘದ ಹೆಸರಿಗೆ ನೋಂದಾಯಿಸಲು ಡೆವಲಪರ್ ಅವರಿಗೆ ತಿಳಿಸಿದ್ದೇವೆ. ಶೀರ್ಘವಾಗಿ ಜಾಗಗಳನ್ನು ಸಂಘದ ಹೆಸರಿಗೆ ನೋಂದಾಯಿಸಿಕೊಳ್ಳುತ್ತೇವೆ ಎಂದು ಸಭೆಯಲ್ಲಿ ವಿವರಿಸಿ ತಿಳಿಸಿದರು.

- ನಂತರ ಸಂಘದ ರಾಜ್ ರೆಸಿಡೆನ್ಸಿ ಬಡಾವಣೆಯ ಸಹಸದಸ್ಯರಾದ ಬಾಲಾಜಿ ಅವರು ಮಾತನಾಡಿ ನಾನು ರಾಜ್‌ರೆಸಿಡೆನ್ಸಿ ಬಡಾವಣೆಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ. ಪ್ರಾಜಕ್ಟ್ ಅಭಿವೃದ್ಧಿ ಆಗುತ್ತಿಲ್ಲ. ಪುನೀತ್ ಅವರಿಗೆ ಬಡಾವಣೆಯ ಉಸ್ತುವಾರಿ ವಹಿಸಿ ಕೊಟ್ಟಿದ್ದೀರ. ಅವರು ಸಂಘದಿಂದ ಸುಮಾರು 3 ಕೋಟಿ ಹಣ ಪಡೆದು ಪ್ರಾಜಕ್ಟ್ ಮುಂದುವರೆಸುತ್ತಿಲ್ಲ. ಅವರ ಮೇಲೆ ಏನು ಕ್ರಮ ಕೈಗೊಂಡಿದ್ದೀರ. ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಿ ಎಂದು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಉಪಾಧ್ಯಕ್ಷರಾದ ಚಂದ್ರಪ್ಪ ಅವರು ಮಾತನಾಡಿ ಡೆವಲಪರ್ ಮೇಲೆ ಕಾನೂನುಕ್ರಮ ಕೈಗೊಳ್ಳಬಹುದು. ಆಗ ಬಡಾವಣೆಯ ಅಭಿವೃದ್ಧಿ ಸ್ಥಗಿತ ಆಗುತ್ತದೆ.

ಈಗಾಗಲೆ ವಿನೋದ್ ಕುಮಾರ್ ಅವರ ಮೇಲೆ ಕಾನೂನು ಕ್ರಮ ಕೈಗೊಂಡಿದ್ದೇವೆ. ರಾಜ್ ರೆಸಿಡೆನ್ಸಿ ಬಡಾವಣೆಯ ಸದಸ್ಯರಿಗೆ ಈಗಾಗಲೆ 2 ಸಭೆಯನ್ನು ಸಹ ಕೊಟ್ಟಿದ್ದೇವೆ. ಹೊಸ ಜಾಗದಲ್ಲಿ ಪ್ರಾಜಕ್ಟ್ ಮುಂದುವರೆಸಲು ಅಂದು ನಡೆಸಿದ ಸಭೆಗಳಲ್ಲಿ ಅನುಮೋದನೆ ಕೇಳಿದಾಗ ಸದಸ್ಯರು ಯಾವುದಕ್ಕೂ ಅನುಮೋದನೆ ಕೊಡಲಿಲ್ಲ. ಹಾಗಾಗಿ ಸಹಕಾರ ಇಲಾಖೆಯಲ್ಲಿ ಅನುಮೋದನೆ ಪಡೆದೆ ಮುಂದುವರೆಯುವುದು ಎಂದು ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಿದ್ದೇವೆ ಅದರಂತೆ ಸಹಕಾರ ಇಲಾಖೆಯಲ್ಲಿ ಅನುಮೋದನೆ ಪಡೆದು ಇನ್ನು ಮುಂದೆ ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಮುಂದುವರೆಸುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು.

- ನಂತರ ಸಂಘದ ನಂದಿಹಿಲ್ಸ್ ರೆಸಿಡೆನ್ಸಿ ಬಡಾವಣೆಯ ಸಹಸದಸ್ಯರಾದ ಲಕ್ಷ್ಮೀಶ ಅವರು ಮಾತನಾಡಿ ನಾನು ನಂದಿಹಿಲ್ಸ್ ರೆಸಿಡೆನ್ಸಿ ಬಡಾವಣೆಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ. ಪ್ರಾಜಕ್ಟ್ ಅಭಿವೃದ್ಧಿ ವಿಳಂಬ ಮಾಡಿದಷ್ಟು ದರ ಹೆಚ್ಚಳ ಆಗುತ್ತಲೆ ಹೋಗುತ್ತದೆ. ನಂದಿಹಿಲ್ಸ್ ಬಡಾವಣೆಯ ಸದಸ್ಯರಿಗೆ ನೀವು ಯಾಕೆ ಮೀಟಿಂಗ್ ಕೊಟ್ಟಿಲ್ಲ ಎಂದು ಸಭೆಯಲ್ಲಿ ಕೇಳಿದರು. ಅದಕ್ಕೆ ಉಪಾಧ್ಯಕ್ಷರಾದ ಚಂದ್ರಪ್ಪ ಅವರು ಮಾತನಾಡಿ ಬೇರೆ ಬಡಾವಣೆಯಲ್ಲಿ ಜಾಗ ಬದಲಾವಣೆ ಆಗುವುದರಿಂದ ಬಡಾವಣೆಯ ಸದಸ್ಯರನ್ನು ಸಭೆ ಕರೆದು ಅದರ ಬಗ್ಗೆ ಚರ್ಚಿಸಿದ್ದೇವೆ. ಆದರೆ ನಂದಿ ಹಿಲ್ಸ್ ಬಡಾವಣೆಯನ್ನು ಅದೇ ಜಾಗದಲ್ಲಿ ಮಾಡುತ್ತಿರುವುದರಿಂದ ಸಭೆ ಕರೆದಿಲ್ಲ. ಇನ್ನು ಎರಡು ವರ್ಷದಲ್ಲಿ ಪ್ರಾಜಕ್ಟ್ ಕಂಪ್ಲೀಟ್ ಮಾಡಿಕೊಡುತ್ತೇವೆ ಎಂದು ಸಭೆಯಲ್ಲಿ ವಿವರಿಸಿ ತಿಳಿಸಿದರು.

- ನಂತರ ಸಂಘದ ಶ್ರೀನಗರ ಬಡಾವಣೆಯ ಸಹಸದಸ್ಯರಾದ ಪ್ರಕಾಶ್ ಅವರು ಮಾತನಾಡಿ ನಾನು ಶ್ರೀನಗರ ಬಡಾವಣೆಯಲ್ಲಿ ನಿವೇಶನಕ್ಕಾಗಿ ನಾನು ಅರ್ಜಿ ಸಲ್ಲಿಸಿದ್ದೇನೆ. ಶ್ರೀನಗರ ಬಡಾವಣೆಯ ಸದಸ್ಯರಿಗೆ ಮೀಟಿಂಗ್ ಕೊಟ್ಟಿದ್ದೀರ. ಅಂದಿನ ಮೀಟಿಂಗ್‌ನಲ್ಲಿ ಸಂಘ ಮತ್ತು ಡೆವಲಪರ್ ಅವರು ತಿಳಿಸಿರುವಂತೆ ಇನ್ನು 2 ವರ್ಷದಲ್ಲಿ ಪ್ರಾಜಕ್ಟ್ ಕಂಪ್ಲೀಟ್ ಮಾಡಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರ. ಅದರಂತೆ ಎಲ್ಲಾ ಸದಸ್ಯರಿಗೂ ಅಗ್ರಿಮೆಂಟ್ ಮಾಡಿಕೊಡುತ್ತೀರ ಎಂಬುದು ಎಲ್ಲಾ ಸದಸ್ಯರ ಪ್ರಶ್ನೆ. ಎಲ್ಲಾ ಸದಸ್ಯರ ಪರವಾಗಿ ನಾನು ಇಂದಿನ ಸಭೆಯಲ್ಲಿ ಕೇಳುತ್ತಿದ್ದೇನೆ ಎಂದು ಸಭೆಯಲ್ಲಿ ಕೇಳಿದರು. ಅದಕ್ಕೆ ಡೆವಲಪರ್ ಆದ ವೇಣುಗೋಪಾಲ್ ನಾಯಕ್ ಅವರು ಮಾತನಾಡಿ ನಾನು ಅಂದಿನ ಸಭೆಯಲ್ಲಿ ತಿಳಿಸಿರುವಂತೆ ಇನ್ನು 2 ವರ್ಷದಲ್ಲಿ ಪ್ರಾಜಕ್ಟ್ ಕಂಪ್ಲೀಟ್ ಮಾಡಿಕೊಡುತ್ತೇನೆ. ಅದಕ್ಕೆ ನಾನು ಬದ್ಧವಾಗಿರುತ್ತೇನೆ. ಸದಸ್ಯರಿಗೆ ಏನು ಭದ್ರತೆ ಬೇಕೊ ಅದನ್ನು ಮಾಡಿಕೊಡಲು ನಾನು ಸಿದ್ದವಾಗಿರುತ್ತೇನೆ ಎಂದು ಸಭೆಯಲ್ಲಿ ಮಾತನಾಡಿ ತಿಳಿಸಿದರು.

ಎಲ್ಲಾ ಸದಸ್ಯರು ಮಾತನಾಡಿದ ಬಳಿಕ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮಾತನಾಡಿ ಎಲ್ಲಾ ಬಡಾವಣೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಸಾಕಷ್ಟು ವಿಳಂಭ ಆಗಿದೆ. ಇನ್ನು ಮುಂದೆ ಹಾಗೆ ಆಗುವುದಿಲ್ಲ. ನೆಲಮಂಗಲ ಬಡಾವಣೆಯ ಮೊದಲನೆ ಹಂತದಲ್ಲಿ ಇರುವ ಸಮಸ್ಯೆಯನ್ನು ಬಗೆಹರಿಸಿ ಶೀರ್ಘವಾಗಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುತ್ತೇವೆ. ಇನ್ನು ಎರಡು ವರ್ಷದಲ್ಲಿ ಎಲ್ಲಾ ಬಡಾವಣೆಗಳನ್ನು ಅಭಿವೃದ್ಧಿಗೊಳಿಸಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಬೇಕೆಂದು ಪಣ ತೊಟ್ಟಿದ್ದೇವೆ. ಎಲ್ಲಾ ಡೆವಲಪರ್ ಅವರುಗಳ ಜೊತೆ ಮಾತನಾಡಿದ್ದೇವೆ . ಅದರಂತೆ ನಾವು ನಡೆದುಕೊಳ್ಳುತ್ತೇವೆ. ಅದಕ್ಕೆ ನಮಗೆ ಸದಸ್ಯರುಗಳಾದ ನಿಮ್ಮ ಸಹಕಾರ ಬೇಕು. ಎಲ್ಲಾ ಬಡಾವಣೆಗಳ ಸದಸ್ಯರಿಗೂ ಬಡಾವಣೆವಾರು ಸಭೆ ಕರೆಯುತ್ತಿದ್ದೇವೆ. ಇನ್ನು ಮುಂದೆ ಬಡಾವಣೆಯ ಅಭಿವೃದ್ಧಿಯಲ್ಲಿ ಆಗುವ ಪ್ರಗತಿಯ ಬಗ್ಗೆ ಪ್ರತ್ಯೇಖವಾಗಿ ಎಲ್ಲಾ ಸದಸ್ಯರಿಗೂ 6 ತಿಂಗಳಿಗೊಮ್ಮೆ ಸಂಘದಿಂದ ಪತ್ರ ಕಳಿಸುತ್ತೇವೆ. ನಾವು ಇಂದಿನ ಸಭೆಯಲ್ಲಿ ತಿಳಿಸಿರುವಂತೆ ಎಲ್ಲಾ ಬಡಾವಣೆಗಳನ್ನು ಇನ್ನು 2 ವರ್ಷದಲ್ಲಿ ಅಭಿವೃದ್ಧಿಗೊಳಿಸಿ ಸದಸ್ಯರೆಲ್ಲರಿಗೂ ನಿವೇಶನ ಹಂಚಿಕೆ ಮಾಡುತ್ತೇವೆ ಅದಕ್ಕೆ ತಾವುಗಳು ನಮಗೆ ಸಹಕಾರ ಕೊಡಿ ಎಂದು ಸಭೆಯಲ್ಲಿ ಎಲ್ಲಾ ಸದಸ್ಯರಲ್ಲಿಯೂ ಮನವಿ ಮಾಡಿದರು.

13. **ಅಧ್ಯಕ್ಷರ ಭಾಷಣ:**–ಸಂಘದ ಅಧ್ಯಕ್ಷರಾದ ಶ್ರೀಯುತ ಎಸ್. ಸುಬ್ರಮಣಿ ರವರು ಅಧ್ಯಕ್ಷೀಯ ಭಾಷಣ ಮಾಡುತ್ತ, ತಾವು ಎಲ್ಲರು ಇಂದಿನ ಸಭೆಗೆ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದ್ದೀರಿ. ಅದಕ್ಕಾಗಿ ತಮ್ಮೆಲ್ಲರಿಗೂ ಅಭಿವಂದನೆಗಳು. ಎಲ್ಲಾ ಬಡಾವಣೆಗಳ ಕೆಲಸಗಳು ವಿಳಂಭವಾಗಿರುವುದಕ್ಕೆ ನಾನು ವಿಷಾಧಿಸುತ್ತೇನೆ. ಇನ್ನು ಮುಂದೆ ಎಲ್ಲಾ ಬಡಾವಣೆಗಳ ಕೆಲಸಗಳನ್ನು ಶೀರ್ಘವಾಗಿ ಪ್ರಾರಂಭಿಸಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು ನಾವು ನಮ್ಮ ಶಕ್ತಿಮೀರಿ ಪ್ರಯತ್ನಿಸುತ್ತೇವೆ. ಆದರೆ ಬಡಾವಣೆಗಳ ಭೂಮಿಗಳಲ್ಲಿ ದಾವೆಗಳಾಗಿರುವುದರಿಂದ ವಿಳಂಬ ಆಗುತ್ತಿದೆ. ಸಂಘದ ಸದಸ್ಯರು ಮತ್ತು ಸಹ ಸದಸ್ಯರುಗಳಾದ ತಾವುಗಳು ನಮಗೆ ಸಹಕರಿಸಿ. ಎಂದು ಎಲ್ಲರಿಗೂ ಅಭಿನಂದನೆ ತಿಳಿಸಿ ಭಾಷಣ ಮುಗಿಸಿದರು.

14. **ವಂದನಾರ್ಪಣೆ:**–ಸಂಘದ ನಿರ್ದೇಶಕರಾದ ಶ್ರಿಮತಿ ಮಂಗಳಗೌರಮ್ಮ ಅವರು ಮಾತನಾಡುತ್ತಾ ಸಭೆಗೆ ಆಗಮಿಸಿ ಸಲಹೆ ಸೂಚನೆಗಳನ್ನು ಕೊಟ್ಟು ನಮ್ಮನ್ನು ಪ್ರೊತ್ಸಾಹಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸಂಘದ ಎಲ್ಲಾ ಸದಸ್ಯರಿಗೂ ಮತ್ತು ಸಹ ಸದಸ್ಯರಿಗೂ ಗೌರವಿಸಿ ವಂದನೆ ಸಲ್ಲಿಸಿದರು. ನಂತರ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂಧಿ ವರ್ಗಕ್ಕೆ ಸಂಘದ ಪರವಾಗಿ ವಂದನೆಗಳನ್ನು ಸಲ್ಲಿಸಿದರು. ನಂತರ ಕಾಲಕಾಲಕ್ಕೆ ಕಾನೂನಿನ ಬಗ್ಗೆ ಸಲಹೆ ಸೂಚನೆಗಳನ್ನು ಕೊಟ್ಟು ನಮ್ಮನ್ನು ಮುನ್ನಡೆಸುತ್ತಿರುವ ಸರ್ಕಾರದ ಕೊ ಆಪರೇಟಿವ್ ಅಧಿಕಾರಿ ವರ್ಗಕ್ಕೆ, ಲೆಕ್ಕ ಪರಿಶೋಧಕರಿಗೆ, ಪೋಲೀಸ್ ಸಿಬ್ಬಂಧಿ ವರ್ಗಕ್ಕೆ, ಇಂದಿನ ಸಭೆಗೆ ಆಹಾರ ಸರಬರಾಜು ಮಾಡಿದವರಿಗೆ, ಸಭೆಯ ಕಲಾಪವನ್ನು ಚಿತ್ರಸಿದವರಿಗೆ, ನಮ್ಮ ಧ್ವನಿಯನ್ನು ತಮ್ಮೆಲ್ಲರಿಗೂ ತಲುಪಸಿದ ಸೌಂಡ್ ಸಿಸ್ಟಮ್ ನವರಿಗೆ, ಸಭೆಯನ್ನು ನಡೆಸಿಕೊಟ್ಟ ನಿರೂಪಕರಾದ ಎಚ್ ಎಸ್ ಪ್ರಸಾದ್ ಅವರಿಗೆ ಮತ್ತು ಕೊನೆಯದಾದರೂ ಪ್ರಮುಖವಾಗಿ ಸಭೆ ನಡೆಸಲು ಸ್ಥಳಾವಕಾಶ ಮಾಡಿಕೊಟ್ಟ ನಾಟಕ ಶಿರೋಮಣಿ ಎ.ವಿ. ವರದಾಚಾರ್ ಮೆಮೋರಿಯಲ್ ಹಾಲ್ ಆಡಳಿತ ವರ್ಗಕ್ಕೆ ನಮ್ಮ ಸಂಘದ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು ಎಂದು ವಂದನಾರ್ಪಣೆ ಮಾಡಿದರು.

ವಂದನಾರ್ಪಣೆಯ ನಂತರ ಅಧ್ಯಕ್ಷರು ಸದಸ್ಯರೆಲ್ಲರಿಗೂ ವಂದಿಸುತ್ತಾ ಸಭೆಯು ಮುಕ್ತಾಯವಾಯಿತೆಂದು ಘೋಷಿಸಿದರು.

**ಸಹಿ/–**
**( ಎಸ್. ಸುಬ್ರಮಣಿ)**
**ಅಧ್ಯಕ್ಷರು**

## -: 2025-26 ನೇ ಸಾಲಿನ ವಾರ್ಷಿಕ ಆಡಳಿತ ವರದಿ :-

ನಮ್ಮ ಸಂಘದ 2025-26 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಹಾಗೂ ಆದರಪೂರ್ವಕವಾಗಿ ಸ್ವಾಗತಿಸುತ್ತೇನೆ. ಸದರಿ ಸಾಲಿನ ಆಡಳಿತ ವರದಿಯನ್ನು ಸಂಘದ ಪರವಾಗಿ ಈ ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ಸಂಘದ ಸ್ಥಾಪನೆ ಮತ್ತು ಉದ್ದೇಶ**

ನಮ್ಮ ಸಂಘವು 2007 ರಲ್ಲಿ ಸ್ಥಾಪನೆಯಾಗಿದ್ದು, ಸಂಘದ ಸ್ಥಾಪನೆಯಾದ ದಿನದಿಂದಲೂ ಸಂಘದ ಅಭಿವೃದ್ಧಿ ಹಾಗೂ ಸದಸ್ಯರ ಹಿತಾಸಕ್ತಿಗಾಗಿ ನೀವೆಲ್ಲರೂ ನೀಡುತ್ತಿರುವ ಸಹಕಾರ ಮತ್ತು ಬೆಂಬಲಕ್ಕೆ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸಂಘವು ಸ್ಥಾಪನೆಯಾದ ದಿನದಿಂದಲೂ ಸದಸ್ಯರಿಗೆ ನಿವೇಶನ ಒದಗಿಸುವ ಮಹತ್ವದ ಧ್ಯೇಯದೊಂದಿಗೆ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ, ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶದಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಈ ಉದ್ದೇಶವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಂಘವು ತನ್ನ ಕಾರ್ಯಚಟುವಟಿಕೆಗಳನ್ನು ಮುಂದುವರಿಸುತ್ತಿದೆ.

**ಆಡಳಿತ ಮಂಡಳಿಯ ಚುನಾವಣೆ**

2025-26 ನೇ ಸಾಲಿನ ಅವಧಿಯಲ್ಲಿ ಆಡಳಿತ ಮಂಡಳಿಯ ಚುನಾವಣಾ ಅವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಚುನಾವಣಾ ಪ್ರಾಧಿಕಾರದ ನಿರ್ದೇಶನದಂತೆ ಮುಂದಿನ 5 ವರ್ಷಗಳ ಅವಧಿಗೆ ದಿನಾಂಕ 26.01.2026 ರಂದು ಚುನಾವಣೆ ನಡೆಯಿತು. ಸದರಿ ಚುನಾವಣೆಯಲ್ಲಿ ಅವಿರೋಧವಾಗಿ 13 ಮಂದಿ ನಿರ್ದೇಶಕರು ಆಯ್ಕೆಯಾಗಿರುತ್ತಾರೆ.
ತದನಂತರ ದಿನಾಂಕ 05.02.2026 ರಂದು, ಚುನಾವಣಾಧಿಕಾರಿಗಳ ಸಮಕ್ಷಮದಲ್ಲಿ ಸಂಘದ ಕಚೇರಿಯಲ್ಲಿ ಪದಾಧಿಕಾರಿಗಳ ಚುನಾವಣೆ ನಡೆಯಿತು. ಸದರಿ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಎಸ್. ಸುಬ್ರಮಣಿಯವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಚಂದ್ರಪ್ಪನವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಆಡಳಿತ ಮಂಡಳಿಯ ಸಭೆಗಳು**

2025-26 ನೇ ಸಾಲಿನಲ್ಲಿ ಆಡಳಿತ ಮಂಡಳಿಯ ವತಿಯಿಂದ 08 ಮಾಸಿಕ ಸಭೆಗಳು ಹಾಗೂ 03 ತುರ್ತು ಸಭೆಗಳು, ಒಟ್ಟು 11 ಸಭೆಗಳನ್ನು ನಡೆಸಲಾಗಿದೆ. ಈ ಸಭೆಗಳಲ್ಲಿ ಸಂಘದ ಆಡಳಿತ, ಬಡಾವಣೆ ಅಭಿವೃದ್ಧಿ ಕಾರ್ಯಗಳು ಹಾಗೂ ಸದಸ್ಯರ ಹಿತಾಸಕ್ತಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚರ್ಚಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಸಂಘದ ವೆಬ್‌ಸೈಟ್ ಬದಲಾವಣೆ**

ಸಂಘದ ಹಳೆಯ ವೆಬ್‌ಸೈಟ್‌ನಲ್ಲಿ ತಾಂತ್ರಿಕ ಸಮಸ್ಯೆಗಳು ಉಂಟಾಗಿದ್ದ ಹಿನ್ನೆಲೆಯಲ್ಲಿ, ಸದಸ್ಯರಿಗೆ ಸಂಘದ ಮಾಹಿತಿಗಳನ್ನು ಸುಲಭವಾಗಿ ಮತ್ತು ನಿರಂತರವಾಗಿ ಒದಗಿಸುವ ಉದ್ದೇಶದಿಂದ ವೆಬ್‌ಸೈಟ್ ಬದಲಾವಣೆ ಮಾಡಲಾಗಿದೆ. ಸಂಘದ ವೆಬ್‌ಸೈಟ್: bsnlempshousing.com ಆಗಿರುತ್ತದೆ. ಹೊಸ ವೆಬ್‌ಸೈಟ್ ಕುರಿತು ಸಂಘದ ಸದಸ್ಯರಿಗೆ ಇ-ಮೇಲ್ ಮೂಲಕ ಮಾಹಿತಿ ನೀಡಲಾಗಿದೆ. ಸಂಘದ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಮಾಹಿತಿ, ಪ್ರಗತಿ ವಿವರಗಳು ಹಾಗೂ ಮುಂದಿನ ದಿನಗಳಲ್ಲಿ ಸಂಘದಿಂದ ಪ್ರಕಟಿಸಲಾಗುವ ಪ್ರಮುಖ ಮಾಹಿತಿಗಳನ್ನು ಹೊಸ ವೆಬ್‌ಸೈಟ್‌ಲ್ಲಿ ಪ್ರಕಟಿಸಲಾಗುವುದು. ಸದಸ್ಯರು ಸಂಘದ ವೆಬ್‌ಸೈಟ್ ಅನ್ನು ನಿಯಮಿತವಾಗಿ ಪರಿಶೀಲಿಸಿ, ಬಡಾವಣೆಗಳ ಅಭಿವೃದ್ಧಿ ಹಾಗೂ ಸಂಘದ ಇತರೆ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆದುಕೊಳ್ಳುವಂತೆ ವಿನಂತಿಸಲಾಗಿದೆ.

**ಹೊಸ ಆಡಳಿತ ಮಂಡಳಿಯ ಧ್ಯೇಯ ಮತ್ತು ಬದ್ಧತೆ**

2025-26 ನೇ ಸಾಲಿನಲ್ಲಿ ಹೊಸ ಆಡಳಿತ ಮಂಡಳಿ ರಚನೆಯಾಗಿದ್ದು, ಸಂಘದ ಶ್ರೇಯೋಭಿವೃದ್ಧಿಯನ್ನು ಮುಖ್ಯ ಧ್ಯೇಯವನ್ನಾಗಿಸಿಕೊಂಡು, ಎಲ್ಲರೂ ಒಗ್ಗಟ್ಟಿನಿಂದ ಹಾಗೂ ಒಮ್ಮತದಿಂದ ಕಾರ್ಯನಿರ್ವಹಿಸುವ ದೃಢ ಸಂಕಲ್ಪವನ್ನು

ಹೊಂದಿದ್ದೇವೆ. ಸಂಘದ ಸದಸ್ಯರ ಬಹುದಿನಗಳ ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು, ಸಂಘದಲ್ಲಿ ಹಮ್ಮಿಕೊಂಡಿರುವ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ಪೂರ್ಣಗೊಳಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ.

ಹಲವಾರು ಕಾರಣಗಳಿಂದಾಗಿ ಸಂಘದ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳಲ್ಲಿ ವಿಳಂಬ ಉಂಟಾಗಿದೆ. ಈ ವಿಳಂಬವನ್ನು ನಿವಾರಿಸುವ ನಿಟ್ಟಿನಲ್ಲಿ, ಎಲ್ಲಾ ಬಡಾವಣೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಕರಾರು, ಒಪ್ಪಂದಗಳನ್ನು ನವೀಕರಿಸಲಾಗಿದ್ದು, ಸಂಬಂಧಪಟ್ಟ ಎಲ್ಲಾ ಡೆವಲಪರ್‌ರವರು ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಂಬಂಧಿಸಿದ ಯೋಜನೆಗಳನ್ನು ಪೂರ್ಣಗೊಳಿಸಿ ನಿವೇಶನಗಳನ್ನು ಸಂಘಕ್ಕೆ ಹಸ್ತಾಂತರಿಸುವುದಾಗಿ ಕರಾರು, ಒಪ್ಪಂದಗಳಲ್ಲಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಎಲ್ಲಾ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳನ್ನು ಶೀಘ್ರವಾಗಿ ಪ್ರಾರಂಭಿಸಿ, ನಿಗದಿತ ಅವಧಿಯೊಳಗೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿ, ಅರ್ಹ ಸದಸ್ಯರಿಗೆ ನಿವೇಶನಗಳ ಹಂಚಿಕೆ ಮಾಡಿಕೊಡುವ ನಿಟ್ಟಿನಲ್ಲಿ ಆಡಳಿತ ಮಂಡಳಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಸದಸ್ಯರ ಆಶೋತ್ತರಗಳನ್ನು ಈಡೇರಿಸುವುದು ನಮ್ಮ ಆದ್ಯ ಕರ್ತವ್ಯ ಹಾಗೂ ಪ್ರಮುಖ ಗುರಿಯಾಗಿದೆ. ಈ ನಿಟ್ಟಿನಲ್ಲಿ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಒಗ್ಗಟ್ಟಿನಿಂದ, ಸಮನ್ವಯದಿಂದ ಹಾಗೂ ನಿರಂತರ ಪ್ರಯತ್ನದೊಂದಿಗೆ ಕಾರ್ಯನಿರ್ವಹಿಸುತ್ತಿದ್ದೇವೆ.

ಬಡಾವಣೆ ಅಭಿವೃದ್ಧಿ ಕಾರ್ಯಗಳು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ನಿವೇಶನಕ್ಕಾಗಿ ಪಾವತಿಸಿರುವ ಹಣ ಮರುಪಾವತಿಗಾಗಿ ಮನವಿ ಸಲ್ಲಿಸಿರುವ ಸದಸ್ಯರಿಗೆ, ನಿಯಮಾನುಸಾರ ಅವರು ಪಾವತಿಸಿರುವ ಮೊತ್ತವನ್ನು ಮರುಪಾವತಿಸುವ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಮುಂದಿನ ದಿನಗಳಲ್ಲಿಯೂ ಸಂಘದ ಅಭಿವೃದ್ಧಿ ಮತ್ತು ಸದಸ್ಯರ ಹಿತಾಸಕ್ತಿಗಾಗಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಬದ್ಧತೆಯನ್ನು ಹೊಂದಿದ್ದೇವೆ. ನಮ್ಮ ಸಂಘದ ಅಭಿವೃದ್ಧಿಗೆ ಹಾಗೂ ಎಲ್ಲಾ ಕಾರ್ಯಚಟುವಟಿಕೆಗಳಿಗೆ ತಮ್ಮೆಲ್ಲ ಸದಸ್ಯರು ಇದೇ ರೀತಿಯ ಸಹಕಾರ ಮತ್ತು ಬೆಂಬಲವನ್ನು ಮುಂದುವರಿಸುತ್ತೀರಿ ಎಂಬ ವಿಶ್ವಾಸವಿದೆ.

**ಸಂಘವು ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳ ಕುರಿತು ಕಿರು ಟಿಪ್ಪಣಿ**

**ನೆಲಮಂಗಲ ಮಾಧವನಗರ ಬಡಾವಣೆ**

ನೆಲಮಂಗಲ ಮಾಧವನಗರ ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ನೇಮಿಸಲಾಗಿದ್ದ ಡೆವಲಪರ್‌ರವರು ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಲು ವಿಫಲವಾದ ಹಿನ್ನೆಲೆಯಲ್ಲಿ, ಅವರ ವಿರುದ್ಧ ಮಧ್ಯಸ್ಥಿಕೆ ಕೇಂದ್ರದಲ್ಲಿ (Arbitration Centre) ಸಂಘವು ಕಾನೂನು ಕ್ರಮ ಕೈಗೊಂಡಿದ್ದು, ಪ್ರಕರಣವು ಪ್ರಸ್ತುತ ನಡೆಯುತ್ತಿದೆ.

ಈ ಬಡಾವಣೆಗೆ ಸಂಬಂಧಿಸಿದಂತೆ ಒಟ್ಟು 8 ಎಕರೆ 13 ಗುಂಟೆ ಜಮೀನಿನ ಕಾಮಗಾರಿ ನಕ್ಷೆಯನ್ನು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ. ನಂತರ ನಕ್ಷೆಯಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಲಾಗಿದೆ. ಅದರಂತೆ ಬಡಾವಣೆಯ ಕಾಮಗಾರಿ ಕಾರ್ಯ ಪೂರ್ಣಗೊಂಡಿದ್ದು, ನಿವೇಶನಗಳು ಹಂಚಿಕೆಗೆ ಸಿದ್ಧವಾಗಿವೆ. ಪ್ರಸ್ತುತ ಮಾರ್ಪಡಿಸಿದ ನಕ್ಷೆ (Modified Plan), ಅಂತಿಮ ನಕ್ಷೆ ಅನುಮೋದನೆ ಹಾಗೂ 100% ನಿವೇಶನ ಬಿಡುಗಡೆ ಪತ್ರ ಪಡೆಯುವ ಕಾರ್ಯ ಪ್ರಕ್ರಿಯೆಯಲ್ಲಿದೆ.

ಇದಲ್ಲದೆ, ಸಂಘದ ಸರ್ವೆ ನಂ.130/3ರ ಪಕ್ಕದಲ್ಲಿರುವ ಸರ್ವೆ ನಂ.130/2ರ ಮಾಲೀಕರಾದ ಸೌಭಾಗ್ಯ ಎಂಬುವರು

ಸಂಘವು ಜಾಗವನ್ನು ಒತ್ತುವರಿ ಮಾಡಿಕೊಂಡು ಬಡಾವಣೆಯನ್ನು ಅಭಿವೃದ್ಧಿಪಡಿಸಿದ್ದಾರೆಂಬ ವಿಚಾರಕ್ಕೆ ಸಂಬಂಧಿಸಿದಂತೆ, ಸಂಘಕ್ಕೆ ಜಾಗವನ್ನು ಮಾರಾಟ ಮಾಡಿರುವ ಲಕ್ಷ್ಮಣಯ್ಯ ಅವರ ವಿರುದ್ಧ ಸೌಭಾಗ್ಯ ಅವರು O.S. No.482/2024ರ ದಾವೆಯನ್ನು ಹೂಡಿದ್ದು, ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆದಿದ್ದಾರೆ. ಹಾಗೆಯೇ, ಸರ್ವೆ ನಂ.130/3ರ ಜಾಗದಲ್ಲಿ ಸಂಘದಿಂದ ಬಡಾವಣೆಯ ಅಭಿವೃದ್ಧಿ ಕಾರ್ಯ ಮಾಡಲು ತೊಂದರೆ ಉಂಟುಮಾಡುತ್ತಿರುವ ಸೌಭಾಗ್ಯ ಅವರ ವಿರುದ್ಧ ಸಂಘದಿಂದ O.S. No.323/2025ರ ದಾವೆಯನ್ನು ಹೂಡಲಾಗಿದ್ದು, ಪ್ರಕರಣವು ಪ್ರಸ್ತುತ ನಡೆಯುತ್ತಿದೆ.

ಮೇಲ್ಕಂಡ ಕಾನೂನು ಹಾಗೂ ಇತರೆ ಸಮಸ್ಯೆಗಳ ಕಾರಣದಿಂದ ನಿವೇಶನಗಳ ಹಂಚಿಕೆಯಲ್ಲಿ ವಿಳಂಬ ಉಂಟಾಗಿದೆ. ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ, ಸೌಭಾಗ್ಯ ಅವರ ಜಾಗವು ಸಂಘದ ಜಾಗದಲ್ಲಿ ಒತ್ತುವರಿ ಆಗಿದ್ದಲ್ಲಿ, ಅಂತಹ ಜಾಗವನ್ನು ಬಿಟ್ಟು ಕೊಡಲು ಸಂಘ ಸಿದ್ಧವಿರುವುದಾಗಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಲಿಖಿತವಾಗಿ ತಿಳಿಸಲಾಗಿದೆ. ಅಂತಿಮ ನಕ್ಷೆ ಅನುಮೋದನೆ ದೊರೆತ ನಂತರ ಸದಸ್ಯರ ಹಿರಿಯತಾ ಕ್ರಮದ ಆಧಾರದ ಮೇಲೆ ನಿವೇಶನಗಳ ಹಂಚಿಕೆ ಮಾಡಲು ಸಂಘವು ಕ್ರಮ ಕೈಗೊಳ್ಳಲಿದೆ.

ಬಾಕಿ ಉಳಿದಿರುವ ಸದಸ್ಯರಿಗೆ ನಿವೇಶನಗಳನ್ನು ಒದಗಿಸುವ ಉದ್ದೇಶದಿಂದ ಮತ್ತು ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ಕಲ್ಲೋಡು ಗ್ರಾಮದಲ್ಲಿ ಪರ್ಯಾಯ ಜಾಗವನ್ನು ಗುರುತಿಸಿ, 10 ಎಕರೆ ಜಾಗಕ್ಕೆ ಸಂಬಂಧಿಸಿದಂತೆ ಮಿಥುನ್ ಎಂಟರ್‌ಪ್ರೈಸಸ್ ಸಂಸ್ಥೆಯ ಮಾಲೀಕರಾದ ಶ್ರೀ ಮಂಜುನಾಥ್ ಜಿ. ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಮೊದಲನೇ ಹಂತದ ನಿವೇಶನಗಳ ಹಂಚಿಕೆ ವಿಳಂಬವಾಗುತ್ತಿರುವುದರಿಂದ, ಎರಡನೇ ಹಂತದ ಬಡಾವಣೆಯ ಅಭಿವೃದ್ಧಿ ಕಾರ್ಯವೂ ವಿಳಂಬವಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಸಂಬಂಧಿಸಿದ ಪ್ರಕ್ರಿಯೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಎರಡನೇ ಹಂತದ ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಕೂಡ ಶೀಘ್ರದಲ್ಲೇ ಪ್ರಾರಂಭಿಸಿ, ಬಾಕಿ ಉಳಿದಿರುವ ಸದಸ್ಯರಿಗೆ ನಿವೇಶನಗಳನ್ನು ಒದಗಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

**ಏರೋಪಾರ್ಕ್ ಟೌನ್‌ಶಿಪ್ ಬಡಾವಣೆ**

ಏರೋಪಾರ್ಕ್ ಟೌನ್‌ಶಿಪ್ ಬಡಾವಣೆಯ ಅಭಿವೃದ್ಧಿ ಕಾರ್ಯಕ್ಕಾಗಿ ಶ್ರುತಿ ಎನ್‌ಕ್ಲೇವ್ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಒಟ್ಟು 233 ನಿವೇಶನಗಳನ್ನು ಸದಸ್ಯರ ಹಿರಿಯತಾ ಕ್ರಮದ ಆಧಾರದ ಮೇಲೆ ಹಂಚಿಕೆ ಮಾಡಿ ನೋಂದಣಿ ಮಾಡಿಕೊಡಲಾಗಿದೆ. ಉಳಿದ ಜಮೀನಿಗೆ ಸಂಬಂಧಿಸಿದಂತೆ ಕೆಲವು ಹೊಂದಾಣಿಕೆ ಸಮಸ್ಯೆಗಳು ಹಾಗೂ ಕೆಲವು ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಪ್ರಕರಣಗಳು ಇರುವುದರಿಂದ ಅಭಿವೃದ್ಧಿ ಕಾರ್ಯದಲ್ಲಿ ವಿಳಂಬವಾಗಿದೆ. ಈ ಹಿನ್ನೆಲೆಯಲ್ಲಿ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕಿನ ಸೋಲೂರು ಗ್ರಾಮದಲ್ಲಿರುವ ಜಮೀನನ್ನು ಅಭಿವೃದ್ಧಿಪಡಿಸಲು ಆಡಳಿತ ಮಂಡಳಿಯು ನಿರ್ಧರಿಸಿದೆ. ಈ ಸಂಬಂಧದ ಒಪ್ಪಂದವನ್ನು ನವೀಕರಿಸಲಾಗಿದ್ದು, ಡೆವಲಪರ್‌ರವರು 24 ತಿಂಗಳೊಳಗೆ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ. ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಜಮೀನು ಸಂಘದ ಹೆಸರಿಗೆ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

**ಏರೋಪಾರ್ಕ್ ರೆಸಿಡೆನ್ಸಿ ಬಡಾವಣೆ**

ಏರೋಪಾರ್ಕ್ ರೆಸಿಡೆನ್ಸಿ ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ನೇಮಿಸಲಾಗಿದ್ದ ಶ್ರೀ ಲಕುಮೇಶ್ ಡೆವಲಪರ್ ಅವರು ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಲು ವಿಫಲವಾದ ಹಿನ್ನೆಲೆಯಲ್ಲಿ, ಅವರ ವಿರುದ್ಧ ಮಧ್ಯಸ್ಥಿಕೆ ಕೇಂದ್ರದಲ್ಲಿ ಅಗತ್ಯ ಕಾನೂನು ಕ್ರಮಗಳನ್ನು ಸಂಘದ ವತಿಯಿಂದ ಕೈಗೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ, ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಮುಂದುವರಿಸುವ ಉದ್ದೇಶದಿಂದ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕಿನ ಸೋಲೂರು ಗ್ರಾಮದಲ್ಲಿರುವ ಜಾಗಕ್ಕೆ ಸಂಬಂಧಿಸಿದಂತೆ, ಶ್ರುತಿ ಎನ್ಕ್ಲೇವ್ ಸಂಸ್ಥೆಯ ಮಾಲೀಕರಾದ ಶ್ರೀ ನಾಗರಾಜ್ ಎನ್. ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಬಡಾವಣೆಯ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಏರೋಪಾರ್ಕ್ ಟೌನ್‌ಶಿಪ್ ಮತ್ತು ಏರೋಪಾರ್ಕ್ ರೆಸಿಡೆನ್ಸಿ ಬಡಾವಣೆಗಳನ್ನು ಒಂದೇ ಸ್ಥಳದಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಶ್ರೀಯುತ ಶ್ರುತಿ ಎನ್ಕ್ಲೇವ್ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಎರಡೂ ಬಡಾವಣೆಗಳ ಸದಸ್ಯರಿಗೂ ಒಂದೇ ಸ್ಥಳದಲ್ಲಿ ನಿವೇಶನಗಳನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ನಂದಿ ಹಿಲ್ಸ್ ರೆಸಿಡೆನ್ಸಿ ಬಡಾವಣೆ**

ನಂದಿ ಹಿಲ್ಸ್ ರೆಸಿಡೆನ್ಸಿ ಬಡಾವಣೆಗೆ ಸಂಬಂಧಿಸಿದ ಜಮೀನುಗಳಲ್ಲಿ ವಿವಿಧ ಕಾನೂನು ಮತ್ತು ಭೂಮಿಯ ಹೊಂದಾಣಿಕೆ ಸಮಸ್ಯೆಗಳು ಇರುವುದರಿಂದ ಅಭಿವೃದ್ಧಿ ಕಾರ್ಯದಲ್ಲಿ ವಿಳಂಬವಾಗಿದೆ. ಈ ಹಿನ್ನೆಲೆಯಲ್ಲಿ ಡೆವಲಪರ್ ರೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ನವೀಕರಿಸಲಾಗಿದೆ. ಡೆವಲಪರ್‌ರವರು ಸುಮಾರು 12 ಎಕರೆ ಹೊಂದಾಣಿಕೆಯಾಗಿರುವ ಜಮೀನನ್ನು 18 ತಿಂಗಳೊಳಗೆ ಅಭಿವೃದ್ಧಿಪಡಿಸುವುದಾಗಿ ತಿಳಿಸಿದ್ದಾರೆ.
ಜಮೀನಿನ ಪೋಡಿ ಸರ್ವೆಗಾಗಿ ಅರ್ಜಿ ಸಲ್ಲಿಸಲಾಗಿದ್ದು, ಪೋಡಿ ಕಾರ್ಯ ಪೂರ್ಣಗೊಂಡ ನಂತರ ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡಿ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀನಗರ ಬಡಾವಣೆ**

